


## ಮಿದುಳಿನ ಮಹಿಮೆ

ಸಂಸ್ಕೃತದಲ್ಲಿ ತಲೆಯನ್ನು ಉತ್ತಮಾಂಗ ಎಂದು ಕರೆಯಲಾಗಿದೆ. ಅದು ದೇಹದ ಅಂಗಗಳಲ್ಲೆಲ್ಲ ಉತ್ತಮವಾದುದು. ಸಂಸ್ಕೃತದ ಒಂದು ಶ್ಲೋಕದ ಪ್ರಕಾರ ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ—"ದೇಹದಲ್ಲೆಲ್ಲ ತಲೆಯೇ ಪ್ರಧಾನ." ಇದು ಸುಮ್ಮನೆ ತಲೆಹರಟೆಯಲ್ಲ, ಇತ್ತೀಚಿನ ಸಂಶೋಧನೆಗಳ ಪ್ರಕಾರ ಮಿದುಳು ಜಗತ್ತಿನ ಯಂತ್ರಗಳಲ್ಲೆಲ್ಲ ಪರಮಾದ್ಭುತವಾದುದು ಮತ್ತು ಅತ್ಯಂತ ಸಂಕೀರ್ಣವಾದುದು. ಇದು ಕೇವಲ ನಮ್ಮ ದೈಹಿಕ ಚಟುವಟಿಕೆಗಳನ್ನು ನಿಯಂತ್ರಿಸುವ ರಿಮೋಟ್ ಕಂಟ್ರೋಲ್ ಮಾತ್ರವಲ್ಲ, ಮಾನಸಿಕ ಕ್ರಿಯೆಗಳ ಕೇಂದ್ರವೂ ಆಗಿದೆ.

ನಾವು ಆಲೋಚನೆ ಮಾಡುವುದೆಂದರೆ ಮಿದುಳಿನಲ್ಲಿರುವ ನ್ಯೂರಾನ್‌ಗಳು ತಮ್ಮ ಜಾಲವನ್ನು ಹೆಚ್ಚು ಹೆಚ್ಚು ವಿಸ್ತಾರವಾಗಿ ಹರಡುವುದು. ನಮ್ಮ ಆಲೋಚನೆ ತೀವ್ರವಾದಷ್ಟೂ ಈ ನ್ಯೂರಾನ್‌ಗಳ ಓಡಾಟವೂ ತೀವ್ರವಾಗುತ್ತದೆ. ಈ ಮಿದುಳು ಯಾವ ಕಂಪ್ಯೂಟರಿಗೂ ಸಾಧ್ಯವಾಗದಷ್ಟು ಪ್ರಮಾಣದಲ್ಲಿ ಮಾಹಿತಿಗಳನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲದು. ಬಹುಶಃ ಹಿಂದಿನ ಎಷ್ಟೋ ಜನ್ಮಗಳ ಸಂಸ್ಕಾರಗಳೂ ಅದರಲ್ಲಿರುತ್ತವೆ. ಅದು ಅಲ್ಪಾವಧಿಯ ನೆನಪುಗಳನ್ನು ದೀರ್ಘಾವಧಿಯ ನೆನಪುಗಳನ್ನಾಗಿ ಪರಿವರ್ತಿಸಿ ಸಂಗ್ರಹಿಸಿಟ್ಟುಕೊಳ್ಳಬಲ್ಲದು. ಈ ದೀರ್ಘಾವಧಿಯ ನೆನಪುಗಳು ಹಿಪ್ಪೋಕ್ಯಾಂಪಸ್ (hippocampus) ಎಂಬ ಮಿದುಳಿನ ಭಾಗದಲ್ಲಿ ತರ್ಕಬದ್ಧವಾಗಿ ವ್ಯವಸ್ಥಿತಗೊಂಡಿರುತ್ತವೆ. ನಮ್ಮ ಆಲೋಚನೆಗೆ ಇವೇ ಕಚ್ಚಾ ಪದಾರ್ಥಗಳು. ನಮ್ಮ ಆಲೋಚನಾ ಸಾಮರ್ಥ್ಯ ನ್ಯೂರಾನ್‌ಗಳು ಎಷ್ಟು ಬೇಗನೆ, ಎಷ್ಟು ಸಮರ್ಥವಾಗಿ ಈ ನೆನಪುಗಳನ್ನು ಸಂಪರ್ಕಿಸಬಲ್ಲವು ಎಂಬುದನ್ನು ಅವಲಂಬಿಸಿರುತ್ತದೆ.

ಭಾವೋದ್ರೇಕಗಳ ಕೇಂದ್ರವೂ ಮಿದುಳೇ. ಕಾತರತೆ, ಕೋಪ, ಚಿಂತೆ ಮುಂತಾದ ಭಾವಗಳಿಗೆ ಸಂಬಂಧಿಸಿದ ಕೇಂದ್ರಗಳು ಮಿದುಳಿನಲ್ಲಿವೆ. ನಿಷೇಧಾತ್ಮಕ ಭಾವಕ್ಕೆ ಬಹುಬೇಗನೆ ಒಳಗಾಗುವವರಲ್ಲಿ ventromedial (ವೆಂಟ್ರೋಮೀಡಿಯಲ್) ಎಂಬ ಮೆದುಳಿನ ಭಾಗ ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಧ್ಯಾನಕೇಂದ್ರವೂ ಮಿದುಳಿನಲ್ಲಿಯೇ ಇದೆಯಂತೆ. ನಾವು ಧ್ಯಾನ ಮಾಡುವಾಗ ಆ ಕೇಂದ್ರವು ಪ್ರಚೋದಿತವಾಗುತ್ತದಂತೆ. ಆಧ್ಯಾತ್ಮಿಕತೆಗೆ ಸಂಬಂಧಿಸಿದಂತೆ ಈ ಮಿದುಳಿನ ಅಧ್ಯಯನವನ್ನು Nuero theology ಎಂದು ಕರೆಯುತ್ತಾರೆ. ತಲೆಬುರುಡೆಯ ಹಾರ್ಡ್‌ವೇರ್ ಒಳಗೆ ಈ soft(ಮಿದು)ware ವ್ಯಕ್ತಿತ್ವದ ಎಲ್ಲ ಆಯಾಮಗಳನ್ನೂ ನಿಯಂತ್ರಿಸುತ್ತಿರುವಂತೆ ಕಂಡುಬರುತ್ತಿದೆ. ಆದರೆ ಮಿದುಳಿನ ಬಗ್ಗೆ ಇಷ್ಟೆಲ್ಲ ಅಧ್ಯಯನ ನಡೆದಿದ್ದರೂ ಅದರ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪವೆನ್ನುತ್ತಾರೆ. ❖

## ಓದುವ ಆಸೆ ತಂದ ಸಾವು

"ವಿದ್ಯಾರ್ಜನೆಯೇ ಸಮಾಜದ ಎಲ್ಲ ಕೆಡುಕುಗಳಿಗೆ ದಿವ್ಯೌಷಧ" ಎಂದರು ಸ್ವಾಮಿ ವಿವೇಕಾನಂದರು. ಪ್ರಪಂಚದಾದ್ಯಂತ ಸಂಚರಿಸಿದ ಸ್ವಾಮೀಜಿ, ಭಾರತದ ಬಡಜನರ ದುಃಸ್ಥಿತಿಗೂ ಹೊರದೇಶದ ಬಡಜನರ ಸ್ಥಿತಿಗೂ ಇರುವ ಅಂತರ ಕಂಡು ಮಮ್ಮಲ ಮರುಗುತ್ತ "ಕೇವಲ ವಿದ್ಯೆ, ವಿದ್ಯೆ, ವಿದ್ಯೆಯೊಂದೇ" ಪರಿಹಾರವೆಂದು ಸಾರಿದರು.

ಜ್ಞಾನಾಭಿವೃದ್ಧಿಗಾಗಿ ಇರುವ ದಾಹವೇ ಮನುಷ್ಯನನ್ನು ಇತರ ಪ್ರಾಣಿಗಳಿಗಿಂತ ಭಿನ್ನವಾಗಿಸುವುದು. ಎಷ್ಟೋ ಜನ ಸಮಾಜ ಸುಧಾರಕರು ಆಗಿಹೋದರು, ಹಾಗೂ ಎಷ್ಟೋ ಜನ ಇನ್ನೂ ಉದಯವಾಗಲಿರುವರು. ಇಷ್ಟೊಂದು ಸುಧಾರಣೆಯ ಕೂಗಿನ ಧ್ವನಿಯೂ ಕಿವಿಗೇ ಬೀಳದ "ಸುಸಂಸ್ಕೃತರು" ಇನ್ನೂ ಇದ್ದಾರೆ ಎಂದರೆ ಸೋಜಿಗವಲ್ಲವೆ? ಶಾಲೆಗೆ ಹೋಗಬೇಕೆಂಬ ಅಭೀಪ್ಸೆಯೇ ಮೃತ್ಯುವಿನ ದವಡೆಗೆ ಒಯ್ಯುವುದೆಂಬ ಕಲ್ಪನೆಯೂ ಭೀಕರ! ಆದರೆ *Beijing Legal Times*ನ ವರದಿಯನುಸಾರ ಏಳು ವರ್ಷದ ಹುಡುಗನೊಬ್ಬ ಪ್ರಾಥಮಿಕ ಶಾಲೆಗೆ ಹೋಗಬೇಕೆಂದು ತಂದೆಯನ್ನು ಆಸೆಯಿಂದ ಕೇಳಿಕೊಂಡದ್ದೇ ದೊಡ್ಡ ಅಪರಾಧವಾಯಿತಂತೆ. ಕೋಪದಿಂದ ಆ ಆಸುರೀಸಂಪದ್ಭರಿತನಾದ ತಂದೆ ಮಗನನ್ನು ಬೆತ್ತಲೆಗೊಳಿಸಿ ಏಳು ಗಂಟೆಗಳ ಕಾಲ ಹೊಡೆದು, ಚಚ್ಚಿ ಚಿತ್ರಹಿಂಸೆಗೆ ಗುರಿಮಾಡಿದನಂತೆ. ಈ ಸಾಹಸ ಕಾರ್ಯದ ನಂತರ ಧೂಮಪಾನ ಮಾಡುತ್ತ ಕುಳಿತುಕೊಂಡನಂತೆ. ಹುಡುಗ ನಿಶ್ಚೇಷ್ಟಿತನಾಗಿ ಬಿದ್ದುಕೊಂಡಿದ್ದನು. ನಂತರ ತಂದೆ ಅವನನ್ನು ಆಸ್ಪತ್ರೆಗೆ ಎತ್ತಿಕೊಂಡು ಹೋದನು. ವೈದ್ಯರು ಪರೀಕ್ಷಿಸಿ ಹೇಳಿದರು ಅವನು ಮೃತಪಟ್ಟಿರುವನೆಂದು.

ಭಾರತದಲ್ಲಿಯಾದರೂ ಎಷ್ಟು ಜನ ತಂದೆತಾಯಿಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುತ್ತಾರೆ? ನೀಡಿದರೂ ವಿದ್ಯೆಗಾಗಿ ಅಲ್ಲ, ಡಿಗ್ರಿ ಪಡೆದು ಹಣ ಸಂಪಾದನೆ ಮಾಡುವುದಕ್ಕಾಗಿ. ಅದಕ್ಕಾಗಿ ತುಂಬ ಒತ್ತಡ ಹೇರಲಾಗುತ್ತದೆ. ಕೆಲವೊಮ್ಮೆ ಅತಿರೇಕಕ್ಕೂ ಹೋಗುವುದುಂಟು. ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ಒಂದು ಹೃದಯ ವಿದ್ರಾವಕ ಘಟನೆ ಅತ್ಯಂತ ಶೋಚನೀಯವಾದುದು. ಒಬ್ಬ ತಾಯಿ ತನ್ನ ಸ್ವಂತ ಮಗಳನ್ನೇ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲಿಲ್ಲ ಎಂಬ ಕಾರಣಕ್ಕೆ ಸೀಮೆಎಣ್ಣೆ ಸುರಿದು ಸುಟ್ಟಳಂತೆ. ಶಿಕ್ಷಣ ನಮ್ಮನ್ನು ಸುಶಿಕ್ಷಿತರನ್ನಾಗಿ ಮಾಡುವ ಬದಲು ಅನಾಗರಿಕರನ್ನಾಗಿ ಮಾಡುತ್ತಿದೆಯಲ್ಲ? ಶಿಕ್ಷಣದ ವಿಷಯದಲ್ಲಿ ಮರುಚಿಂತನೆ ಆವಶ್ಯಕವಲ್ಲವೆ? ನಮ್ಮನ್ನು ಆಳುವವರಿಗೆ ಈ ಗುರುತರ ಜವಾಬ್ದಾರಿಯ ಅರಿವು ಇದೆಯೆ? "ವಿದ್ಯಾವಿಹೀನಃ ಪಶುಃ" ಎಂದು ನೀತಿಶತಕ ಹೇಳಿದರೆ ಇಂದು ವಿದ್ಯೆಯುಳ್ಳವರೇ ಪಶುಗಳಂತೆ ವರ್ತಿಸುತ್ತಿರುವುದು ತುಂಬ ವಿಷಾದಕರ. ❖